(1009) (COPY)

**ಕರ್ನಾಟಕ ಸರ್ಕಾರ**

ಸಂಖ್ಯೆ:ಎಡಿಎಂ.13.ಸಿಆರ್ 53/09-10

ಆಯುಕ್ತರ ಕಾರ್ಯಾಲಯ,
ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ
ಧರ್ಮಾದಾಯ ದತ್ತಿಗಳ ಇಲಾಖೆ, ಬೆಂಗಳೂರು
ದಿನಾಂಕ:14-05-2010

**ಸುತ್ತೋಲೆ**

ವಿಷಯ:- ಕರ್ನಾಟಕ ರಾಜ್ಯದಲ್ಲಿರುವ ಮುಜರಾಯಿ ಸಂಸ್ಥೆಗಳಿಗೆ ಸೇರಿದ ಇನಾಂ ಜಮೀನು ಸರ್ಕಾರದಲ್ಲಿ ವಿಹಿತವಾಗಿರುವ ಬಗ್ಗೆ.

ಉಲ್ಲೇಖ:- ಸಹಾಯಕ ಆಯುಕ್ತರವರು ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ,ರವರ ಪತ್ರ ಸಂಖ್ಯೆ:ದಿನಾಂಕ:5-4-2010.

------

ರಾಜ್ಯದ ಹೆಚ್ಚಿನ ಜಿಲ್ಲೆಗಳ ಅಧಿಸೂಚಿತ ಸಂಸ್ಥೆಗಳಿಗೆ ಸೇರಿದ ಜಮೀನುಗಳು ಇನಾಂ ರದ್ಧತಿ ಕಾಯಿದೆ-1955ರಡಿ ಸರ್ಕಾರಕ್ಕೆ ವಿಹಿತವಾಗಿ ತಸ್ತೀಕ್ ಮಂಜೂರಾದ ನಂತರವೂ ಈ ಜಮೀನುಗಳ ಖಾತೆಯು ಕೆಲವೊಂದು ಪ್ರಕರಣಗಳಲ್ಲಿ ದೇವಸ್ಥಾನದ ಹೆಸರಿನಲ್ಲೇ ಮುಂದುವರೆದುಕೊಂಡು ಬರಲಾಗುತ್ತಿದೆ. ಇಂತಹ ಜಮೀನುಗಳ ಪಹಣಿಗಳಲ್ಲಿ ದೇವಸ್ಥಾನದ ಹೆಸರನ್ನು ನಮೂದಿಸುವ ಬದಲು **'ಸರ್ಕಾರಿ'** ಜಮೀನೆಂದು ನಮೂದಿಸಿ, ಅಂತಹ ಜಮೀನುಗಳಲ್ಲಿ ಒತ್ತುವರಿ ಏನಾದರೂ ಆಗಿದ್ದಲ್ಲಿ ಅದನ್ನು ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಜಮೀನುಗಳ ಒತ್ತುವರಿ ಎಂದು ಪರಿಗಣಿಸಬೇಕಾಗಿರುತ್ತದೆ. ಹಾಗೂ ಇದು ದೇವಸ್ಥಾನಗಳ ಜಮೀನುಗಳ ಒತ್ತುವರಿ ಎಂದು ಪರಿಗಣಿಸಲು ಬರುವುದಿಲ್ಲ. ಕಾರಣ 1-7-1970 ರಿಂದ ಇದು ದೇವಸ್ಥಾನಗಳ ಜಮೀನಾಗಿರುವುದಿಲ್ಲ.

DVS

COR/3255/10-11

ಇಂತಹ ಸಂದರ್ಭಗಳಲ್ಲಿ ಸದರಿ ಜಮೀನನ್ನು ದೇವಸ್ಥಾನದ ಉಪಯೋಗಕ್ಕೆ ಅವಶ್ಯಕವಿದೆ ಎಂದಾದರೆ ಸಂಬಂಧಿಸಿದ ಸಂಸ್ಥೆಗಳವರು ಜಾರಿಯಲ್ಲಿರುವ ವಿವಿಧ ಕಾಯ್ದೆಗಳ ಇತಿಮಿತಿಗೊಳಪಟ್ಟು ಅರ್ಜಿಯನ್ನು ಸಲ್ಲಿಸಲು ಅವಕಾಶವಿದ್ದರೆ ಅಂತಹ ಅರ್ಜಿಗಳನ್ನು ಪರಿಗಣಿಸಿ ಜಮೀನು ದೇವಸ್ಥಾನದ ಹೆಸರಿಗೆ ಮಂಜೂರಾದ ನಂತರದಲ್ಲಿ ಮಾತ್ರ ದೇವಸ್ಥಾನದ ಜಮೀನಾಗುವುದರಿಂದ ಅಲ್ಲಿಯತನಕ

220



ಅಂತಹ ಜಮೀನುಗಳ ಪಹಣಿಗಳಲ್ಲಿ **'ಸರ್ಕಾರಿ'** ಎಂದು ನಮೂದಿಸಲು ಸಂಬಂಧಿಸಿದ ಪ್ರಾಧಿಕಾರಿಗಳಿಗೆ ಸೂಚಿಸಲು ತಿಳಿಸಿದೆ.

ತಮ್ಮ ನಂಬುಗೆಯ,

ಸಹಿ:

**(ರಾಮಣ್ಣ ನಾಯ್ಕ)**

**ಆಯುಕ್ತರು**

ಧಾರ್ಮಿಕ ದತ್ತಿ ಇಲಾಖೆ,ಬೆಂಗಳೂರು.

ಗೆ,

1) ಎಲ್ಲಾ ಜಿಲ್ಲಾಧಿಕಾರಿಯವರಿಗೆ
2) ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
3) ಎಲ್ಲಾ ಉಪ ವಿಭಾಗಾಧಿಕಾರಿಗಳವರಿಗೆ
4) ಎಲ್ಲಾ ತಹಶೀಲ್ದಾರ್‌ರವರುಗಳಿಗೆ
5) ಸಹಾಯಕ ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆ/ಸಹಾಯಕ ಆಯುಕ್ತರು, ಮುಜರಾಯಿ ಕಾಮಗಾರಿಗಳು, ನಗರ ಸಭಾ ವಲಯ,ಬೆಂಗಳೂರು/ಬೆಂಗಳೂರು ಗ್ರಾಮಾಂತರ ಜಿಲ್ಲೆ.
6) ಮುಜರಾಯಿ ಸಹಾಯಕರುಗಳಿಗೆ
7) ಕಾರ್ಯನಿರ್ವಾಹಕ ಅಧಿಕಾರಿಗಳು, ಶ್ರೀ______________________________ ದೇವಸ್ಥಾನ,
8) ಹೆಚ್ಚುವರಿ ಪ್ರತಿ
9) ಸ್ಥಾಯಿ ಕಡತಕ್ಕೆ

ಆಯುಕ್ತರ ಪರವಾಗಿ,

ಧಾರ್ಮಿಕ ದತ್ತಿ ಇಲಾಖೆ,ಬೆಂಗಳೂರು.

ಶಾ.